


ಎಡದಿಂದ ಬಲಕ್ಕೆ

| | | |
|---|---|---|
| 1. | ವ್ಯವಸಾಯವನ್ನು ಮಾಡುವ ಹಳೆಯ ಪದ್ಧತಿಗಳಿಗೆಲ್ಲ ಅವನೊಡನೆಯೇ ಅಂತ್ಯ | 4 |
| 3. | ಪರಿಹಾರದ ಧನವನ್ನು ಪಡೆಯುವುದೊಂದೇ ಅವರೆಲ್ಲರಿಗೂ ಮುಖ್ಯ | 3 |
| 4. | ಊರಿನ ಗೌಡನನ್ನೇ ಹೆದರಿಸಿತು ನೋಡಿ ಮಂಗ ಹಿಂಡಿನ ಮುಂದಾಳು | 3 |
| 6. | ಅಲಕ್ಷಿತರ ಸಂಖ್ಯೆ ಆ ದೇಶದಲ್ಲಿ ನೂರಾರು ಸಾವಿರ | 4 |
| 7. | ಅರಣ್ಯವನ್ನೆಲ್ಲ ಕಡಿದು ಸಿದ್ಧಪಡಿಸಿರುವ ಪ್ರದೇಶ ಇದು | 4 |
| 8. | ರಾಮನ ಹಿಂದೆ ಶಕ್ತಿಯಾಗಿದ್ದವನೇ ಕೃಷ್ಣನ ಸಹೋದರ | 4 |
| 10. | ಸಾಲಾಗಿ ನಿಂತಿದ್ದವರಿಗೆಲ್ಲ ಹಂಚಿದ್ದು ರುಚಿ ತುಂಬಿದ ಸಿಹಿ ತಿಂಡಿ | 4 |
| 12. | ಯುದ್ಧದ ಅರಿವು ಇಲ್ಲದವರಿಗೆಲ್ಲ ಶತ್ರುವಿನ ಹೆದರಿಕೆ | 4 |
| 14. | ಪ್ರಸಿದ್ಧ ವ್ಯಾಯಾಮ ಶಾಲೆಯ ಬಳಿಯೇ ಇದೆ ಈಶ್ವರನ ಮನೆ | 4 |
| 16. | ಕ್ಷೀರದಲ್ಲಿ ಮುಳುಗಿಸಿ ತೆಗೆದದ್ದು ಈಶ್ವರನ ಕಣ್ಣಿನಂಥ ಪವಿತ್ರ ಮಣಿ | 3 |
| 17. | ವಿಜಯವನ್ನೇ ಸಾಧಿಸಿ ಬಂದಾಕೆ ಈ ತರುಣಿ | 3 |
| 18. | ಸಂಪೂರ್ಣ ತೃಪ್ತನಾದವನ ಗುರಿ ಋಷಿ ಮುನಿಗಳ ಕಾಡು | 4 |

ಮೇಲಿನಿಂದ ಕೆಳಕ್ಕೆ

| | | |
|---|---|---|
| 1. | ಅಲೆಯುತ್ತಿದ್ದವನ ಕಣ್ಣಿಗೆ ಕಂಡದ್ದು ಅದೆಂಥ ಬೆಂಕಿ? | 3 |
| 2. | ರಂಗು ರಂಗಿನ ಮನರಂಜನೆಗೆ ತಕ್ಕದ್ದು ಶಹರವೇ ತಾನೇ? | 3 |
| 3. | ಪ್ರಾಣಕ್ಕೇ ಕೈ ಹಾಕಿದ್ದು ಎಂಥ ಘಟನೆ? | 4 |
| 5. | ಕೇವಲ ಒಂದು ಕೀಲಿಯನ್ನು ಪಡೆಯಲೂ ನ್ಯಾಯವಾದಿ ಬೇಕೇ? | 3 |
| 7. | ಭಂಡ ಜನರೇ ತುಂಬಿದ್ದ ಆ ಕಾರ್ಯಕ್ರಮ ಬರೀ ತೋರಿಕೆ ಅಷ್ಟೆ | 4 |
| 9. | ಮಲ್ಲಿಗೆಯ ಹೂ ಮಳೆಯ ಬದಲು ಸಂಭವಿಸಿದ್ದು ಸರ್ವನಾಶ | 4 |
| 11. | ಗುಟ್ಟಾಗಿ ಕೊಟ್ಟು ಬಂದದ್ದು ಹಕ್ಕಿ ಮರಿಯ ಬಾಯಿಗೆ ತುತ್ತು | 3 |
| 13. | ಮೆರೆಯ ಬಂದವರನ್ನೆಲ್ಲ ಬೆದರಿಸಿದ್ದು ಇದೇ ಗಜ ಶಿಶು! | 4 |
| 14. | ಶಕ್ತಿವಂತನಷ್ಟೇ ಅಲ್ಲ, ಆತ ಶಿಕ್ಷಣ ಪಡೆದಿದ್ದಾನೆ ಕೂಡ | 3 |
| 15. | ಬೃಹತ್ ಯೋಜನೆ ಯಶಸ್ವಿಯಾಗಲೆಂದು ಈ ಹೋಮ ಹವನ | 3 |

### 17–3–2022 ಉತ್ತರಗಳು

ಎಡದಿಂದ ಬಲಕ್ಕೆ

1. ಅಂಬರ 3. ಕರಿದು 4. ಸೀಮಿತ 6. ಗೆಳತಿ 7. ಅವನತಿ 9. ಬಲಬದಿ 11. ತಿರುಮಲ 13. ರವಿವಾರ 15. ಸಂದೇಹ 17. ನಡುಕ 18. ಸಿಡುಕ 19. ಟಗರು

ಮೇಲಿನಿಂದ ಕೆಳಕ್ಕೆ

1. ಅಂದುಗೆ 2. ರಸೀತಿ 3. ಕದನ 5. ತಬಲ 7. ಅಧಿಪತಿ 8. ತಿಲತೈಲ 9. ಬಡಿವಾರ 10. ದಿನಕರ 12. ಮಲಿನ 14. ವಿವೇಕ 15. ಸಂಕಟ 16. ಹಸಿರು

ಪ್ರಶ್ನಾಂಕಣ

# ಹೋಮಿನಿಡ್ ಮತ್ತು ಹೋಮಿನಿನ್ಸ್

ಮೂಲತಃ ಆಧುನಿಕ ಮಾನವರಾಗಿರುವ ನಮ್ಮನ್ನು (ಹೋಮೊ ಸೆಪಿಯನ್ಸ್ ಪ್ರಭೇದ) ಮತ್ತು ನಮ್ಮ ಅತ್ಯಂತ ಸನಿಹದ ಪೂರ್ವ ಮಾನವ ಪ್ರಭೇದಗಳನ್ನು ಒಳಗೊಂಡ ಗುಂಪಿಗೆ ಹೋಮಿನಿಡ್ಸ್ ಎಂಬ ವೈಜ್ಞಾನಿಕ ಹೆಸರನ್ನು ಜೀವ ವಿಜ್ಞಾನಿಗಳು ರೂಪಿಸಿ ಬಳಕೆಗೆ ತಂದಿದ್ದರು. ನಂತರ 1990ರ ದಶಕದಲ್ಲಿ ಹೋಮಿನಿಡ್ ಪದದ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಆಧುನಿಕ ಮನುಷ್ಯರ ಮತ್ತು ಪೂರ್ವ ಮಾನವ ಪ್ರಭೇದಗಳ ಜೊತೆಗೆ 'ಮಹಾ ವಾನರರು' (ದಿ ಗ್ರೇಟ್ ಏಪ್ಸ್) ಎಂದೇ ಗುರುತಿಸಲಾಗಿರುವ ಗೊರಿಲ್ಲ, ಚಿಂಪಾಂಜಿ ಮತ್ತು ಒರಾಂಗೊಟಾನ್‌ಗಳನ್ನೂ ಅವುಗಳ ಪೂರ್ವಜರನ್ನೂ ಹೋಮಿನಿಡ್ ಗುಂಪಿಗೇ ಸೇರಿಸಲಾಯಿತು.

2005 ಆಗಸ್ಟ್‌ನ ಅಂತ್ಯದ ವೇಳೆಗೆ ಚಿಂಪಾಂಜಿಗಳು ಜೈವಿಕವಾಗಿ ಶೇಕಡ 96ರಷ್ಟು ಆಧುನಿಕ ಮನುಷ್ಯರನ್ನೇ ಹೋಲುತ್ತವೆ ಎಂಬ ಅಚ್ಚರಿಯ ಅಂಶ ಶೋಧಗೊಂಡಿತು. ಕೂಡಲೇ ಹೋಮಿನಿಡ್ ಗುಂಪಿನಿಂದ ಮನುಷ್ಯರನ್ನೂ, ಚಿಂಪಾಂಜಿಗಳನ್ನೂ ಪ್ರತ್ಯೇಕಿಸಿ ಅವನ್ನೆಲ್ಲ ಬೇರೊಂದು ಗುಂಪನ್ನಾಗಿ ವರ್ಗೀಕರಿಸಬೇಕೆಂಬ ವಾದ ಆರಂಭವಾಯಿತು; ಸಾಕಷ್ಟು ವಿವಾದ, ಚರ್ಚೆಗಳು ನಡೆದ ನಂತರ 'ಹೋಮಿನಿನ್ಸ್' ಎಂಬ ಹೊಸ ಗುಂಪೊಂದು ಅಸ್ತಿತ್ವ ಪಡೆಯಿತು. ಹಾಗೆ ನಿರ್ಧಾರವಾಗಿರುವಂತೆ 'ಹೋಮಿನಿಡ್ಸ್' ಮತ್ತು 'ಹೋಮಿನಿನ್ಸ್' ಗುಂಪುಗಳ ಪ್ರಸ್ತುತ ಅರ್ಥ, ವ್ಯಾಪ್ತಿ ಮತ್ತು ಅಂತರಗಳು ಹೀಗಿವೆ:

- ಹೋಮಿನಿಡ್ಸ್: ಪ್ರಸ್ತುತ ಬದುಕಿರುವ 'ಮಹಾ ವಾನರ'ರ ಎಲ್ಲ ಪ್ರಭೇದಗಳು, ಎಂದರೆ ಆಧುನಿಕ ಮನುಷ್ಯರ ಒಂದೇ ಒಂದು ಪ್ರಭೇದ (ಹೋಮೊ ಸೆಪಿಯನ್ಸ್), ಗೊರಿಲ್ಲದ ಎರಡು ಪ್ರಭೇದಗಳು, ಚಿಂಪಾಂಜಿಯ ಎರಡು ಪ್ರಭೇದಗಳು ಹಾಗೂ ಒರಾಂಗೊಟಾನ್‌ನ ಮೂರು ಪ್ರಭೇದಗಳು ಈ ಎಂಟೂ ಪ್ರಭೇದಗಳು ಮತ್ತು ಹೋಮೊ ಸೆಪಿಯನ್ಸ್ ಅನ್ನು ಹೊರತುಪಡಿಸಿ ಉಳಿದೆಲ್ಲ ಮಹಾ ವಾನರರ ಅಳಿದುಹೋಗಿರುವ (ಜೈಗಾಂಟೋಪಿತೀಕಸ್: ಚಿತ್ರ 1, ಶಿವಾಪಿಥೀಕಸ್, ನಕಲಿಪಿಥೀಕಸ್... ಇತ್ಯಾದಿ) ಎಲ್ಲ ಪ್ರಭೇದಗಳು ಹೋಮಿನಿಡ್ಸ್ ಗುಂಪಿನಲ್ಲಿವೆ.




- ಹೋಮಿನಿನ್ಸ್: ಆಧುನಿಕ ಮನುಷ್ಯ ಮತ್ತು ಈಗ್ಗೆ 13 ದಶಲಕ್ಷ ವರ್ಷಗಳ ಹಿಂದೆ ಚಿಂಪಾಂಜಿಗಳಿಂದ ಕವಲೊಡೆದು ಬಂದು ಈಗ ಒಂದೂ ಉಳಿದಿಲ್ಲದ ಎಲ್ಲ ಪೂರ್ವ ಮಾನವ ಪ್ರಭೇದಗಳು ಎಂದರೆ ಆರ್ಡಿಪಿಥೀಕಸ್, ಅಸ್ಟ್ರಲೋಪಿಥೀಕಸ್, ಹೋಮೊ ಇರೆಕ್ಟಸ್, ಹೋಮೊ ನಿಯಾಂಡರ್ಥಾಲೆನ್ಸಿಸ್, ಹೋಮೊ ನಾಲೆಡಿ, ಕ್ರೋಮ್ಯಾನನ್ ಮನುಷ್ಯ... ಇತ್ಯಾದಿ (ಚಿತ್ರ 2, 3, 4, 5) ಈವರೆಗೆ ಪತ್ತೆಯಾಗಿರುವ ಎಲ್ಲ 20 ಪ್ರಭೇದಗಳು ಹೋಮಿನಿನ್ ಗುಂಪಿನಲ್ಲಿವೆ. ನಮ್ಮ ಪ್ರಭೇದ 'ಹೋಮೊ ಸೆಪಿಯನ್ಸ್' ಮಾತ್ರ ಈ ಎರಡೂ ಗುಂಪುಗಳಲ್ಲಿದೆ ಎಂಬುದನ್ನು ಗಮನಿಸಿದಿರಿ ತಾನೇ?

■ ಎನ್. ವಾಸುದೇವ್